# ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1 | ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 1064 |
| 2 | ಸದಸ್ಯರ ಹೆಸರು | : | ಶ್ರೀಮತಿ ಭಾರತಿ ಶೆಟ್ಟಿ (ನಾಮನಿರ್ದೇಶನ ಹೊಂದಿದವರು) |
| 3 | ಉತ್ತರಿಸುವ ದಿನಾಂಕ | : | 14-12-2023 |
| 4 | ಉತ್ತರಿಸುವವರು | : | ಉಪ ಮುಖ್ಯಮಂತ್ರಿಗಳು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಪ್ರಸ್ತುತ ಸರ್ಕಾರವು ಬೆಂಗಳೂರನ್ನು ಯಾವ ಮಟ್ಟಕ್ಕೆ ವಿಸ್ತರಿಸಲು ಯೋಜನೆ-ಯೋಚನೆ ಹೊಂದಿದೆ; (ವಿವರ ಒದಗಿಸುವುದು) | ಬೆಂಗಳೂರನ್ನು ಜಾಗತಿಕ ಮಟ್ಟದ ವಾಸಯೋಗ್ಯ ನಗರವನ್ನಾಗಿ ರೂಪಿಸಲು ಉದ್ದೇಶಿಸಲಾಗಿದೆ. |
| ಆ) | ಸದರಿ ವಿಸ್ತರಣೆಗೆ ಅನುಗುಣವಾಗಿ ಸಿದ್ಧಪಡಿಸಿಕೊಳ್ಳಬೇಕಿರುವ ಇತರೆ ಮೂಲ ಸೌಕರ್ಯಗಳ ಬಗ್ಗೆ ಸರ್ಕಾರದ ಸಿದ್ಧತೆಗಳೇನು; | • ಈ ನಿಟ್ಟಿನಲ್ಲಿ 'ಬ್ರ್ಯಾಂಡ್ ಬೆಂಗಳೂರು' ಪರಿಕಲ್ಪನೆಯನ್ನು ಘೋಷಿಸಲಾಗಿದೆ.<br>• ಯೋಜನೆಗೆ ಸಂಬಂಧಿಸಿದಂತೆ 70,000ಕ್ಕೂ ಹೆಚ್ಚು ಅಭಿಪ್ರಾಯ / ಸಲಹೆಗಳು ನಾಗರಿಕರು (ಆನ್‌ಲೈನ್ ಮೂಲಕ) ಮತ್ತು ತಜ್ಞರಿಂದ ಸ್ವೀಕೃತಗೊಂಡಿರುತ್ತದೆ.<br>• ಬೆಂಗಳೂರಿನಲ್ಲಿ ವಾಹನ ದಟ್ಟಣೆ ತಪ್ಪಿಸಲು ಒಟ್ಟು 25 ಜಂಕ್ಷನ್‌ಗಳನ್ನು ಅಭಿವೃದ್ಧಿಪಡಿಸುವ ರೂ.27.90 ಕೋಟಿಗಳ ವೆಚ್ಚದ ಕಾಮಗಾರಿ ಪ್ರಗತಿಯಲ್ಲಿದೆ.<br>• ಸುಗಮ ಸಂಚಾರಕ್ಕೆ ಮೂಲಸೌಕರ್ಯಗಳನ್ನು ಒದಗಿಸಲು 'ಸಮಗ್ರ ಸಂಚಾರ ಯೋಜನೆ'ಗಾಗಿ ಕಾರ್ಯಸಾಧ್ಯತೆ ಯೋಜನೆ ವರದಿ ತಯಾರಿಸಲು ಮೆ॥ ಅಲ್ಫಿನಾಕ್ ಸಂಸ್ಥೆಗೆ ವಹಿಸಲಾಗಿದೆ. ಈ ಯೋಜನೆಯನ್ನು ಕಾರ್ಯಗತಗೊಳಿಸುವಲ್ಲಿ ಪೊಲೀಸ್ ಇಲಾಖೆಯ ಸಹಕಾರ ಪಡೆಯಲಾಗುವುದು.<br>• ಬೆಂಗಳೂರಿನ ಘನತ್ಯಾಜ್ಯ ನಿರ್ವಹಣೆಗಾಗಿ ಕನಿಷ್ಠ ಮೂರು ದಿಕ್ಕುಗಳಲ್ಲಿ ಸುಮಾರು ತಲಾ 100 ಎಕರೆ ಪ್ರದೇಶದಲ್ಲಿ ಎಲ್ಲಾ ಬಗೆಯ ತ್ಯಾಜ್ಯಗಳ ಸಂಸ್ಕರಣಾ ಘಟಕಗಳನ್ನು ಬೆಂಗಳೂರು ಘನತ್ಯಾಜ್ಯ ನಿರ್ವಹಣಾ ನಿಗಮ ನಿಯಮಿತದ ಮೂಲಕ ಸ್ಥಾಪಿಸಲು ಯೋಜಿಸಲಾಗಿದೆ.<br>• ಟೆಕ್ ಬೆಂಗಳೂರು ಅಡಿ ಒಂದು 'ಸ್ಕೈ ಡೆಕ್' ನಿರ್ಮಿಸಲು ಸ್ಥಳ ಗುರುತಿಸುವ ಕಾರ್ಯ ಪ್ರಗತಿಯಲ್ಲಿದೆ.<br>• ಸ್ವಚ್ಛ ಬೆಂಗಳೂರು ಅಡಿ ನಗರದ 1344.84 ಕಿ.ಮೀ. ಉದ್ದದ ಆರ್ಟೀರಿಯಲ್ ಮತ್ತು ಸಬ್- ಆರ್ಟೀರಿಯಲ್ ರಸ್ತೆಗಳಿಗಾಗಿ ಯಾಂತ್ರಿಕ ಕಸ ಗುಡಿಸುವ ಯಂತ್ರವನ್ನು ಬಳಸಲು ಉದ್ದೇಶಿಸಲಾಗಿದ್ದು, ಇದಕ್ಕಾಗಿ ವಾರ್ಷಿಕ ಸುಮಾರು ರೂ.130.00 ಕೋಟಿಗಳ ಯೋಜನಾ ವರದಿಯನ್ನು ಸಿದ್ಧಪಡಿಸಲಾಗಿದೆ. |
| ಇ) | ಬೆಂಗಳೂರು ನಗರ ಅನುಭವಿಸುತ್ತಿರುವ ವಿವಿಧ ಸಮಸ್ಯೆಗಳೇನು; ಇವುಗಳನ್ನು ಸರಿಪಡಿಸಲು ಸರ್ಕಾರದ ಕ್ರಮಗಳೇನು; | ಸಮಸ್ಯೆಗಳನ್ನು ಬಗೆಹರಿಸಲು ಬಿಬಿಎಂಪಿಯಿಂದ ಕಾರ್ಯಯೋಜನೆಗಳನ್ನು ಸಿದ್ಧಪಡಿಸಿಕೊಂಡು ಭಾರತ ಸರ್ಕಾರ, ರಾಜ್ಯ ಸರ್ಕಾರ ಮತ್ತು ಬಿಬಿಎಂಪಿ ಅನುದಾನಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಂಡು ಕ್ರಮವಹಿಸಲಾಗುತ್ತಿದೆ. |

...2.

<table>
<tr>
<td>ಈ)</td>
<td>ಉದ್ದೇಶಿತ ವಿಸ್ತರಣೆಯಲ್ಲಿ ಈ ಸಮಸ್ಯೆಗಳು ಉಂಟಾಗದಂತೆ ಮಾಡಲು ಸರ್ಕಾರದ ಕ್ರಮಗಳೇನು?</td>
<td>

• 'ಬ್ರ್ಯಾಂಡ್ ಬೆಂಗಳೂರು' ಯೋಜನೆಗೆ ಸಂಬಂಧಿಸಿದಂತೆ ಸ್ವೀಕೃತಗೊಂಡ ಅಭಿಪ್ರಾಯ / ಸಲಹೆಗಳನ್ನು ಸ್ಪಷ್ಟರೂಪದಲ್ಲಿ ಕ್ರೋಢೀಕರಿಸಲು ಈ ಕೆಳಕಂಡ ಶೈಕ್ಷಣಿಕ ಸಂಸ್ಥೆಗಳನ್ನು ಪಾಲುದಾರರನ್ನಾಗಿ ನಿಯೋಜಿಸಲಾಗಿದೆ:

<table>
<tr><td>ಭಾರತೀಯ ವಿಜ್ಞಾನ ಸಂಸ್ಥೆಯ ಆರ್ಟ್ ಪಾರ್ಕ್</td><td>ಆರೋಗ್ಯಕರ ಬೆಂಗಳೂರು</td></tr>
<tr><td>ಆರ್.ವಿ. ತಾಂತ್ರಿಕ ಮಹಾವಿದ್ಯಾಲಯ</td><td>ಹಸಿರು ಬೆಂಗಳೂರು</td></tr>
<tr><td>ಎಂ.ಎಸ್. ರಾಮಯ್ಯ ಇನ್ಸ್ಟಿಟ್ಯೂಟ್ ಮತ್ತು ಭಾರತೀಯ ವಿಜ್ಞಾನ ಸಂಸ್ಥೆ</td><td>ಸುಗಮ ಸಂಚಾರ ಬೆಂಗಳೂರು</td></tr>
<tr><td>ದಯಾನಂದ ಸಾಗರ ತಾಂತ್ರಿಕ ಮಹಾವಿದ್ಯಾಲಯ</td><td>ಜಲಸುರಕ್ಷಾ ಬೆಂಗಳೂರು</td></tr>
<tr><td>ಸೃಷ್ಟಿ ಮಣಿಪಾಲ್ ಇನ್ಸ್ಟಿಟ್ಯೂಟ್ ಆಫ್ ಡಿಸೈನ್ & ಟೆಕ್ನಾಲಜಿ</td><td>ಜನಹಿತ ಬೆಂಗಳೂರು</td></tr>
<tr><td>ಐಐಐಟಿ</td><td>ಟೆಕ್ ಬೆಂಗಳೂರು</td></tr>
</table>

• 'ಬ್ರ್ಯಾಂಡ್ ಬೆಂಗಳೂರು' ಪರಿಕಲ್ಪನೆಯನ್ನು ಜಾರಿಗೊಳಿಸಲು ಈ ಕೆಳಕಂಡಂತೆ ಸಮಿತಿಗಳನ್ನು ರಚಿಸಲಾಗುವುದು:

<table>
<tr><td>ಮಾನ್ಯ ಉಪ ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ "ಬೃಹತ್ ಬೆಂಗಳೂರು ಸಮನ್ವಯ ಸಮಿತಿ"</td><td>ಈ ಸಮಿತಿಯು ಬೆಂಗಳೂರು ನಗರದ ಸಮಗ್ರ ಅಭಿವೃದ್ಧಿಯ ಕುರಿತಂತೆ ಸಲಹೆ / ಅಭಿಪ್ರಾಯಗಳನ್ನು ಅಳವಡಿಸಿಕೊಳ್ಳಲು ಪ್ರತಿ 10 ದಿನಗಳಿಗೊಮ್ಮೆ ಸಭೆ ನಡೆಸಿ ಕ್ರಮವಹಿಸುತ್ತದೆ.</td></tr>
<tr><td>ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ "ಬೃಹತ್ ಬೆಂಗಳೂರು ಕಾರ್ಯಕಾರಿ ಸಮಿತಿ"</td><td>ಮೇಲ್ಕಂಡ ಸಮಿತಿಯು ನೀಡುವ ಸಲಹೆ / ವರದಿಗಳನ್ನು ಅನುಷ್ಠಾನಗೊಳಿಸಲು ಪ್ರತಿ 15 ದಿನಗಳಿಗೊಮ್ಮೆ ಸಭೆ ನಡೆಸಿ ಕ್ರಮವಹಿಸುತ್ತದೆ.</td></tr>
</table>

</td>
</tr>
</table>

**ಸಂಖ್ಯೆ: ನಅಇ 429 ಎಂಎಸ್‌ವೈ 2023 (ಇ)**

**(ಡಿ.ಕೆ. ಶಿವಕುಮಾರ್)**
ಉಪ ಮುಖ್ಯಮಂತ್ರಿ